**ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿಸಿ ನಂ. 307/2023

ಫ್ರಾಸಾ : 07

ಚಾಸಾ : 08

| | | |
|---|---|---|
| ಹೆಸರು | : | ಶ್ರೇಯಸ್ |
| ತಂದೆಯ ಹೆಸರು | : | ಶ್ರೀನಾಥ್ ಅಮೀನ್ |
| ಫ್ರಾಯ | : | 27 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಶಿರಸಿ |

ದಿಃ **25.07.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಐಎಂವಿ ಕಾಯ್ದೆಯ ಕಲಂ 133 ಅಡಿಯಲ್ಲಿ ನೀಡಿದ ನೋಟೀಸು ಆಗಿದ್ದು ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಐಎಂವಿ ಕಾಯ್ದೆಯ ಕಲಂ 133 ಅಡಿಯಲ್ಲಿ ನೀಡಿದ ನೋಟೀಸಿಗೆ ಉತ್ತರವಾಗಿದ್ದು ಅದನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ನಿ.ಪಿ. 13 ಮತ್ತು 14 ಕ್ಕೆ ದಿನಾಂಕ 06-05-2022 ರಂದು ಪೊಲೀಸ್ ಠಾಣೆಯಲ್ಲಿ ನನ್ನ ವಾಹನ

ಸಂಖ್ಯೆ ಕೆಎ-14-ಬಿ-6579ನ್ನು ಬಿಡುಗಡೆ ಮಾಡುವ ಸಲುವಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿ.ಪಿ. 4 ರಿಂದ 7 ಭಾವಚಿತ್ರಗಳಲ್ಲಿರುವ ವಾಹನ ಸಂಖ್ಯೆ ಕೆಎ-14-ಬಿ-6579ನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಎಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ನಷ್ಟ ಬರ್ತಿ ಮುಚ್ಚಳಿಕೆ ಪತ್ರ ಆಗಿದ್ದು ಅದನ್ನು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಆರೋಪಿ ನನಗೆ ಗೋತ್ತಿಲ್ಲ. ಸಾಕ್ಷಿಯು ನ್ಯಾಯಾಲಯದಿದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎಪಿಪಿಯವರಿಂದಃ -

2. ದಿಃ 07-05-2022 ರಂದು ಅಪಘಾತಕ್ಕೆ ಸಂಬಂದಿಸಿದಂತೆ ಪೊಲೀಸರು ನನಗೆ ಐಎಂವಿ ಕಾಯ್ದೆಯ ಕಲಂ 133 ಅಡಿಯಲ್ಲಿ ನಿ.ಪಿ. 13 ರಂತೆ ನೋಟೀಸು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ನೋಟಿಸೀಗೆ ನಾನು ದಿನಾಂಕ 08-05-2022 ರಂದು ನಿ.ಪಿ. 14 ರಂತೆ ಉತ್ತರ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಉತ್ತರದಲ್ಲಿ ವಾಹನಕ್ಕೆ ಸಂಬಂದಿಸಿದ ದಾಖಲೆಗಳನ್ನು ಹಾಗೂ ಆ ದಿನ ವಾಹನ ಚಾಲಾಯಿಸುತ್ತಿದ್ದ ಚಾಲಕನ್ನು ನೋಡಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರಃ  ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾಧಂ,
ಬಂಟ್ವಾಳ